ಬೀದರ್ ಜಿಲ್ಲೆಯಲ್ಲಿರುವ ತಾಲ್ಲೂಕು ಕೇಂದ್ರಗಳ ಸಂಖ್ಯೆ

೧೩೨೧. ಶ್ರೀ ಬಸವರಾಜ ಪಾಟೀಲ ಅಟ್ಟೂರ್ (ಬಸವ ಕಲ್ಯಾಣ).—ಮಾನ್ಯ ಕಂದಾಯ ಮಂತ್ರಿ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು ಎಷ್ಟು ತಾಲ್ಲೂಕ್ ಕೇಂದ್ರಗಳಿವೆ (ಹಾಗೂ ಅವು ಯಾವುವು ;

ಆ) ಬೆಟನುಸ ಮತ್ತು ಹುಲಿಸೂರಗಳನ್ನು ತಾಲ್ಲೂಕು ಕೇಂದ್ರಗಳನ್ನಾಗಿ ಮಾಡಲು ಸರ್ಕಾರದಲ್ಲಿ ಏನಾದರೂ ಕಾರ್ಯಕ್ರಮವಿದೆಯೆ ;

ಇ) ಇದ್ದರೆ ಯಾವಾಗ ಮಾಡಲಾಗುವುದು?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಬೀದರ್ ಜಿಲ್ಲೆಯಲ್ಲಿ ಒಟ್ಟು ಐದು ತಾಲ್ಲೂಕು ಕೇಂದ್ರಗಳಿವೆ.

೧ ಬೀದರ್
೨ ಹುಮ್ನಾಬಾದ್
೩ ಭಾಲ್ಕಿ
೪ ಜಹೀರಾದ್
೫ ಬಸವಕಲ್ಯಾಣ

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿನ ತಾಂಡಾಗಳ ಸಂಖ್ಯೆ

೧೩೨೩. ಶ್ರೀ ಬಸವರಾಜ ಪಾಟೀಲ ಅಟ್ಟೂರ (ಬಸವ ಕಲ್ಯಾಣ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಬೀದರ್ ಜಿಲ್ಲೆಯಲ್ಲಿ ಎಷ್ಟು ತಾಂಡಾಗಳು ಮತ್ತು ವಾಡಿಗಳಿವೆ, ಪೂರ್ಣ ವಿವರ ನೀಡುವುದು;

ಆ) ತಾಂಡಾಗಳನ್ನು ಗ್ರಾಮಗಳಾಗಿ ಪರಿವರ್ತಿಸಲು ಏನಾದರೂ ಕಾರ್ಯಕ್ರಮವನು ರೂಪಿಸಲಾಗಿದೆಯೇ,

ಇ) ಹಾಗಿದ್ದಲ್ಲಿ, ಎಂದಿನಿಂದ ಈ ಕಾರ್ಯಕ್ರಮ ಜಾರಿಗೆ ತರಲಾಗುವುದು

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಲಂಬಾಣಿ ತಾಂಡಾಗಳು ೨೦೫, ವಾಡಿಗಳು ೬೫. ಪೂರ್ಣ ವಿವರಗಳು ಲಗತ್ತಿಸಿರುವ ಪಟ್ಟಿಯಲ್ಲಿ ಇರುತ್ತವೆ.

ಆ) ಲಂಬಾಣಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಕೇಂದ್ರ ಸರ್ಕಾರದ ಸೂಚನೆಯಂತೆ ೧೯೯೧ ರ ಜನಗಣತಿ ಕಾರ್ಯವು ಸಂಪೂರ್ಣಗೊಂಡ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.